ಶ್ರೀ ಎಚ್. ಸಿದ್ದವೀರಪ್ಪ.—ಆ ವಿಷಯವನ್ನು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿದ್ದಾರೆ, ನಾನೂ ತಿಳಿಸಿದ್ದೇನೆ. ಆ ಐ.ಎನ್.ಟಿ. ಸ್ಪೆಷಲಿಸ್ಟ್ ನರಿಯಾಗಿ ಕೆಲಸ ಮಾಡದೆ ಇದ್ದರೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಆರ್. ಹೊನ್ನಪ್ಪ.—ಅನೇಕ ಎರ್.ಎಫ್. ಡಿಸ್ಪೆನ್ಸರಿಗಳಲ್ಲಿ ದಂತ ವೈದ್ಯರು ಇದ್ದರೂ ಒಂದು ನರಿಯಾದ ಕುರ್ಚಿ ಕೂಡ ಇಲ್ಲದೆ ಹಲ್ಲು ಕೀಳುವುದಕ್ಕೆ ತೊಂದರೆ ಪಡುತ್ತಿರುವುದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ನನ್ನ ಗಮನಕ್ಕೆ ಬಂದಿದೆ. ಯಾವುದೋ ಕುರ್ಚಿಯ ಮೇಲೆ ಕೂಡಿಸಿ ಹಲ್ಲು ಕೀಳುತ್ತಿದ್ದುದನ್ನು ನಾನು ಮಾನ್ಯ ಸದಸ್ಯರ ಊರಿನಲ್ಲಿ ನೋಡಿದ್ದೇನೆ. ಈಗ ಕುರ್ಚಿಗಳಿಗೆ ಆರ್ಡರ್ ಕೊಟ್ಟಿದ್ದೇವೆ. ಅವು ಬರುತ್ತಿವೆ. ಅವು ಬಂದ ಹಾಗೆ ಕಳುಹಿಸಿ ಕೊಡುತ್ತಿದ್ದೇವೆ.

ಶ್ರೀ ಟಿ. ಆರ್. ಶಾಮಣ್ಣ.—ಸರ್ಕಾರಿ ಆಸ್ಪತ್ರೆಗಳಲ್ಲಿ ಹಣದ ಪ್ರಭಾವ ಮತ್ತು ಇನ್ಫ್ಲುಯೆನ್ಸ್ ಇವೆರಡಕ್ಕೂ ಹೆಚ್ಚಿಗೆ ಬೆಲೆ ಇದೆ. ಇದನ್ನು ಸರಿಪಡಿಸುವುದಕ್ಕೆ ಏನಾದರೂ ಕ್ರಮ ತೆಗೆದುಕೊಂಡಿದ್ದಾರೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಹಣದ ಪ್ರಭಾವ ಮತ್ತು ಇನ್ಫ್ಲುಯೆನ್ಸ್ ಕಡಿಮೆಯಾಗ ಬೇಕಾದರೆ ಸಾರ್ವಜನಿಕರು ಮುಂದೆ ಬಂದು ಅವರ ಮೇಲೆ ಒತ್ತಡ ಹಾಕಬೇಕು.

ಶ್ರೀ ಬಿ. ಬೈರಪ್ಪಾಜಿ.—ಬೆಳಿಗ್ಗೆ 8 ರಿಂದ ಮಧ್ಯಾಹ್ನ ಒಂದು ಗಂಟೆ ಮತ್ತು ಸಂಜೆ 4 ರಿಂದ 6 ಗಂಟೆವರೆಗೆ ಕೆಲಸದ ವೇಳೆಯನ್ನು ನಿಗದಿ ಮಾಡಿರುವುದರಿಂದ ಡಾಕ್ಟರುಗಳಿಗೆ ಸ್ವಲ್ಪ ತೊಂದರೆಯಾಗಿದೆ ಎಂದೂ, ಎರಡು ಸಲ ಹೋಗಿ ಬರಬೇಕಾಗಿರುವುದರಿಂದ ಬಹಳ ತೊಂದರೆಯಾಗಿದೆಯೆಂದೂ ಅನೇಕ ವೈದ್ಯರ ಅಭಿಪ್ರಾಯವಿದೆ. ಈ ವೇಳೆಯನ್ನು ಮಾರ್ಪಾಟು ಮಾಡಿ ಹಿಂದೇ ಸಾರಿ ಬಂದು ಆರೆಂಟು ಗಂಟೆ ಕಾಲ ಕೆಲಸ ಮಾಡಿ ಹೋಗುವಂಥ ವ್ಯವಸ್ಥೆಯನ್ನು ಮಾಡಲು ತಮ್ಮ ತೀರ್ಮಾನವನ್ನು ಪುನರ್ವಿಮರ್ಶೆ ಮಾಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಈಗ ಈ ವಿಚಾರ ಮಾಡಿರುವುದು ಜನಗಳ ಅನುಕೂಲಕ್ಕೆ. ಬೆಳಿಗ್ಗೆ 9 ಗಂಟೆಯಿಂದ ಸಂಜೆ ನಾಲ್ಕು ಗಂಟೆಯವರೆಗೆ ಎಂದು ಮಾಡಿದರೆ ಮಧ್ಯಾಹ್ನ ಅವರು ಮನೆಗೆ ಊಟಕ್ಕೆ ಹೋಗಿ ಮಲಗಿಕೊಂಡು ಬರುತ್ತಾರೆ. ಎಷ್ಟೋ ಸಲ ಆಸ್ಪತ್ರೆಯಲ್ಲಿ ಇರುವುದಿಲ್ಲ. ಆದುದರಿಂದ ಅನುಭವದಿಂದಲೇ ಈ ರೀತಿಯ ಬದಲಾವಣೆ ಮಾಡಿದೆ. ಸಾರ್ವಜನಿಕರ ಹಿತದೃಷ್ಟಿಯಿಂದ ಹೀಗೆ ಮಾಡಿದೆ. ಡಾಕ್ಟರುಗಳ ಅನುಕೂಲ ನಾವು ನೋಡುವುದಕ್ಕಾಗುವುದಿಲ್ಲ. ಪ್ರಜೆಗಳ ಅನುಕೂಲಕ್ಕೆ ಡಾಕ್ಟರುಗಳಿರುವುದು.

Sri JAYAPRAKASH SHETTY KOLKEBAIL.—In your answer you have stated that the timings were changed for the convenience of the public. May I know what are those conveniences?

Sri H. SIDDAVEERAPPA.—Conveniences of the public that goes to the hospitals.

GENERAL HOSPITAL NEAR ADUGODI

359. Sri K. R. SRINIVASULU NAYUDU (Shantinagar).—

Will the Minister for Health be pleased to state:—

(*a*) whether the Government is aware of the necessity of having a General Hospital for the benefit of the people residing the area around Adugodi, Austin Town, Sonnenahalli, Domblur, Koramangala and Gowthamapura;

(*b*) if so, the action the Government propose to take in this matter?

Sri H. SIDDAVEERAPPA (Minister for Health).—

(*a*) No

(*b*) Does not arise in view of reply to clause (*a*).

ಶ್ರೀ ಕೆ. ಆರ್. ನಾಯ್ಡು.—(ಎ) ಭಾಗದ ಪ್ರಶ್ನೆಗೆ ಇಲ್ಲ, ಎಂದು ಹೇಳಿದ್ದಾರೆ. ಈ ಪ್ರದೇಶದಲ್ಲಿ ಸುಮಾರು 2 ಲಕ್ಷ ಜನರು, ಕಡುಬಡವರು ಇದ್ದಾರೆನ್ನುವುದು ಸರ್ಕಾರಕ್ಕೆ ಗೊತ್ತಿಲ್ಲವೇ ? ಅಂಥ ಸ್ಥಳದಲ್ಲಿ ಸಾರ್ವಜನಿಕ ಆಸ್ಪತ್ರೆ ಇರಬೇಕು ಎನ್ನುವುದು ಗೊತ್ತಿಲ್ಲವೇ ಸ್ವಾಮಿ ?

ಶ್ರೀ ಎಚ್. ಸಿದ್ದವೀರಪ್ಪ.—ಆ ಒತ್ತಡವನ್ನು ಮಾನ್ಯ ಸದಸ್ಯರು ಕಾರ್ಪೊರೇಷನ್ ಮೇರೆ ತರಬೇಕು, ಅದು ಅವರು ಮಾಡಬೇಕಾದ ಕೆಲಸ because under the Act within the city municipal corporation limits it is the legitimate duty of the Corporation to provide medical facilities tothe people iving in these areas.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಈಗ ಸಿಟಿ ಪ್ರದೇಶದಲ್ಲಿ ಐದು ಜನರಿಗೆ ಆಸ್ಪತ್ರೆಗಳಿವೆ, ಸಿವಿಲ್ ಏರಿಯಾ ಪ್ರದೇಶದಲ್ಲಿ ಒಂದೇ ಒಂದು ಇರುವುದಕ್ಕೆ ಕಾರಣವೇನು ?

ಶ್ರೀ ಎಚ್. ಸಿದ್ದವೀರಪ್ಪ.—ಸಿಟಿಯಲ್ಲಿ ಐದು ಆಸ್ಪತೆಗಳಿರುವುದು ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಮೊದಲನಿಂದಲೂ ಇದೆ. ಇದನ್ನು ನಾನೂಒಪ್ಪಿಕೊಳ್ಳುತ್ತೇನೆ. ಎಲ್ಲಿ ಜನಸಂಖ್ಯೆಯ ಒತ್ತಡವಿದೆ ಅಲ್ಲಿ ಆಸ್ಪತ್ರೆಯ ಅನುಕೂಲಗಳು ಇರಬೇಕು. ಅದಕ್ಕಾಗಿಯೇ ಕಾರ್ಪೊರೇಷನ್ನವರು ಜಯನಗರ ಮತ್ತು ಇನ್ನೂ ಕೆಲವು ಕಡೆ ದೊಡ್ಡ ದೊಡ್ಡ ಆಸ್ಪತ್ರೆಗಳನ್ನು ತೆರೆಯ ಬೇಕೆಂದು ಯೋಜನೆ ಮಾಡಿಕೊಂಡಿದ್ದಾರೆ. ಅವರು ಮಾಡಿದರೆ ಆ ಜನಗಳಿಗೆ ಅನುಕೂಲವಾಗುತ್ತದೆ ಅದುದರಿಂದ ಕಾರ್ಪೊರೇಷನ್ನವರಿಗೆ ನಾವು ಒತ್ತಾಯವಾಗಿ ಇಂಥ ಕಡೆ ಆಸ್ಪತ್ರೆ ಬೇಕು ಎಂದು ಹೇಳಬೇಕಾಗುತ್ತದೆ.

ಶ್ರೀ ಕೆ. ಶ್ರೀರಾಮುಲು.—ಮಾನ್ಯ ಮಂತ್ರಿಗಳು ಎರಡನೆ ಸಲ ಆಸ್ಪತ್ರೆಗಳ ಪ್ರಶ್ನೆ ಬಂದಾಗ ಕಾರ್ಪೊರೇಷನ್ನವರು ಮಾಡಬೇಕೆಂದು ಈ ಸಭೆಯಲ್ಲಿ ಉತ್ತರ ಹೇಳಿದ್ದಾರೆ. ಕಾರ್ಪೊರೇಷನ್ನಿಗೆ ಇರುವ 9 ಕೋಟಿ ರೂಪಾಯಿ ವರವಾನದಲ್ಲಿ ಐದು ಕೋಟಿ ರೂಪಾಯಿ ನಂಬಳಗಳಿಗೇ ಆಗುತ್ತದೆ. ಇತರೇ ಕೆಲಸಗಳಿಗೆ ನಾಲ್ಕು ಕೋಟಿ ರೂಪಾಯಿ ಉಪಯೋಗಿಸುತ್ತಾರೆ. ಬೆಂಗಳೂರು ನಗರದಲ್ಲಿ ಆಸ್ಪತ್ರೆ ಆಗಬೇಕು ಎಂದು ಕೇಳಿದರೆ ಅದಕ್ಕೆ ಸರ್ಕಾರದ ಜವಾಬ್ದಾರಿ ಏನೇನೂ ಇಲ್ಲ ಎನ್ನುವುದು ಸರ್ಕಾರದ ಅಭಿಪ್ರಾಯವೇ ?

ಶ್ರೀ ಎಚ್. ಸಿದ್ದವೀರಪ್ಪ.—ಈಗ ಇರುವ ಆಸ್ಪತ್ರೆಗಳನ್ನು ನಿರಯಾಗಿ ನಡೆಸಿಕೊಂಡು ಹೋಗಬೇಕು ಎನ್ನುವ ಜವಾಬ್ದಾರಿ ಇದೆ. ಈಗಿನ ರೀ ಓರಿಯಂಟೇಷನ್ ಪಾಲಸಿ ಪ್ರಕಾರ ಮೆಡಿಕಲ್ ಫೆಸಿಲಿಟೀಸ್ ಕೊಡತಕ್ಕದ್ದು ಏನಿದ್ದರೂ ಅದಕ್ಕೆ ಆದ್ಯ ಗಮನವನ್ನು ಕೊಡಬೇಕು, ಆ ಮೇರೆ ಬಾಕಿಯದನ್ನು ಯೋಚನೆ ಮಾಡಬೇಕು ಎನ್ನುವುದು ಸರ್ಕಾರದ ನೀತಿಯಾಗಿದೆ. ಬೆಂಗಳೂರು ನಗರದಲ್ಲಿ ಮೆಡಿಕಲ್ ಫೆಸಿಲಿಟೀಸ್ ಬೇಕು ಎನ್ನುವುದಿದ್ದರೆ ಅದರ ಜವಾಬ್ದಾರಿಯನ್ನು ಕಾರ್ಪೊರೇಷನ್ ಹೊರಬೇಕಾದ್ದು ಸೂಕ್ತವಾಗಿದೆ ಎನ್ನುವುದು ಸರ್ಕಾರದ ಅಭಿಪ್ರಾಯ.

ಶ್ರೀ ಬಿ. ಕೃಷ್ಣಪ್ಪಾಜಿ.—ಮಾನ್ಯ ಸದಸ್ಯರ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಅವರು ಪ್ರಶ್ನೆಯನ್ನು ಕಳುಹಿಸಿದ್ದಾರೆ. ಅಲ್ಲಿ ಬಹಳ ಜನ ಬಡವರಿದ್ದಾರೆ. ಸರ್ಕಾರ ತಾವು ಆಸ್ಪತ್ರೆಯನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದೂ ಕಾರ್ಪೊರೇಷನ್ನವರು ಮಾಡಬೇಕೆಂದೂ ಹೇಳಿದ್ದಾರೆ. ಈಗರಾದರೂ ಕೂಡ ಸರ್ಕಾರದವರು ಕಾರ್ಪೊರೇಷನ್ನಿಗೆ ಒತ್ತಾಯ ಮಾಡಿ ಹೇಳಿ ಆ ಕ್ಷೇತ್ರದಲ್ಲಿ ಆಸ್ಪತ್ರೆ ಪ್ರಾರಂಭ ಮಾಡುವ ವ್ಯವಸ್ಥೆಯನ್ನು ಮಾಡುತ್ತಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಕಾರ್ಪೊರೇಷನ್ನಿನವರಿಗೆ ಆ ಬಗ್ಗೆ ಒತ್ತಾಯವಾಗಿ ಹೇಳುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ.—ಈಗ ಜಯನಗರ ಆಸ್ಪತ್ರೆ ಶುರುವಾಗಿ 4 ವರ್ಷಗಳಾದರೂ ಕೂಡ ಅದು ಯಾವ ಸ್ಥಿತಿಯಲ್ಲಿ ಇತ್ತೋ ಅದೇ ಸ್ಥಿತಿಯಲ್ಲಿ ಇದೆ. ಇದನ್ನು ಬೇಗ ಮಾಡುವುದಕ್ಕೆ ಸರಕಾರ ಆದೇಶ ಕೊಡುವುದಕ್ಕೆ ಆಗುವುದಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಕಾರ್ಪೊರೇಷನ್ನಿಗೆ ಹೇಳುತ್ತೇನೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಈ ತರಹ ಒಂದು ದೊಡ್ಡ ಆಸ್ಪತ್ರೆಯನ್ನು ಸರಕಾರದ ವತಿಯಿಂದ ತೆಗೆದುಕೊಳ್ಳುವುದಕ್ಕೆ ಇರುವ ತೊಂದರೆ ಏನು ?

ಶ್ರೀ ಎಚ್. ಸಿದ್ದವೀರಪ್ಪ.—ಈಗ ಇರತಕ್ಕ ಪರಿಸ್ಥಿತಿಯಲ್ಲಿ ಸೆಮಿ ಸ್ಕಾರ್ಡ್ ಫುಲ್ ಸ್ಕಾರ್ಡ್ ಏರಿಯಾ ನಮ್ಮ ದೇಶದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಇದೆ. ಅಲ್ಲಿ ಆದಷ್ಟು ಮೊದಲು ಗಮನ ಕೊಡಬೇಕಾಗಿರುವುದರಿಂದ ನಗರದಲ್ಲಿ ಹೆಚ್ಚಿನ ಬಡಾವಣೆಗಳನ್ನು ಮಾಡತಕ್ಕದ್ದು ಸ್ವಲ್ಪ ಕಷ್ಟವಾಗಿದೆ. ದಯವಿಟ್ಟು ಸರಕಾರದ ಕಷ್ಟವನ್ನು ನೀವು ಅರಿತುಕೊಳ್ಳಲೇ ಬೇಕು ಎಂದು ನಿಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

TEACHERS WORKING IN MYSORE CITY

427. Sri KONANDUR LINGAPPA (Thirtha halli).—

Will the Minister for Education be pleased to state.—

the number of teachers in Government Primary, Middle and High Schools of Mysore City, working there for the last ten years ?

Sri A. R. BADARINARAYANA (Minister for Education).—

Six only.

ಶ್ರೀ ಕೋಣಂದೂರು ಲಂಗಪ್ಪ.—ಸ್ವಾಮಿ 6 ಜನ ಮಾತ್ರ ಮೈಸೂರಿನಲ್ಲಿ 10 ವರ್ಷಗಳಿಂದ ಇದ್ದಾರೆ ಎಂದು ಹೇಳುತ್ತೀರಾ. ಆದರೆ ಮೈಸೂರು ನಗರದಲ್ಲಿ ಆ ಶಾಲೆಯಿಂದ ಈ ಶಾಲೆಗೆ, ಈ ಶಾಲೆಯಿಂದ ಆ ಶಾಲೆಗೆ ಹಾಕಿ ಪೆನ್‌ಷನ್ ಆಗುವವರೆಗೂ ಕೂಡ ಬಹಳ ಜನ ಅಲ್ಲಿಯೇ ಇದ್ದದ್ದು ತಮ್ಮ ಗಮನಕ್ಕೆ ಬಂದಿದೆಯೇ ?

† ಶ್ರೀ ಎ. ಆರ್. ಬದರೀನಾರಾಯಣ್.—ಇದು ಹಿಂದೆ ಇದ್ದಂಥ ಪದ್ಧತಿ. ಈಗ ಈ ಪದ್ಧತಿಯನ್ನು ಬದಲಾವಣೆ ಮಾಡಿದ್ದೇವೆ. 10 ವರ್ಷಗಳಿಗೆ ಮೇಲ್ಪಟ್ಟು ಯಾರು ಯಾವ ಭಾಗದಲ್ಲೂ ಇರಬಾರದು ಎಂದು ತೀರ್ಮಾನಮಾಡಿ ಫೇಸ್ ಪ್ರೋಗ್ರಾಂ ಪ್ರಕಾರ ಮಾಡಿದ್ದೇವೆ. ಆದರ ಪ್ರಕಾರ 48 ಜನಗಳಲ್ಲಿ 42 ಜನಕ್ಕೆ ಟ್ರಾನ್ಸ್‌ಫರ್ ಮಾಡಿದ್ದೇವೆ.

ಶ್ರೀ ಕೋಣಂದೂರು ಲಂಗಪ್ಪ.—ಒಂದೇ ಸ್ಥಳದಲ್ಲಿ ಇರಬಾರದು. ಮೈಸೂರು ಸಿಟಿ ಒಳಗೆ ಶಾಲೆಗಳು ಇರುವುದರಿಂದ ಆ ಶಾಲೆಯಿಂದ ಈ ಶಾಲೆಗೆ ಈ ಶಾಲೆಯಿಂದ ಆ ಶಾಲೆಗೆ ಟ್ರಾನ್ಸ್‌ಫರ್ ಮಾಡಿಕೊಳ್ಳುತ್ತಾರೆ. ಅದಕ್ಕೆ ಬದಲು ಅಲ್ಲಿರುವವರನ್ನು ಹೊರಗೆ ಹಾಕಿ, ಬೇರೆ ಬಾಗಗಳಲ್ಲಿ ಇರುವವರನ್ನು ಇಲ್ಲಿ ಹಾಕಿ ಆ ರೀತಿ ಮಾಡುವುದಕ್ಕೆ ಯೋಜನೆ ಮಾಡುತ್ತೀರಾ ?

ಶ್ರೀ ಎ. ಆರ್, ಬದರೀನಾರಾಯಣ್.—They have been transferred from Mysore City. ಸಿಟಿ ಲಿಮಿಟ್ ಒಳಗಡೆ ಅಲ್ಲ.

ಶ್ರೀ ಎಸ್. ಹೆಚ್. ಪುಟ್ಟರಂಗನಾಥ್.—ಉತ್ತರದಲ್ಲಿ 6 ಜನ ಮಾತ್ರ ಎಂದು ಹೇಳಿದ್ದೀರಿ. 10 ವರ್ಷಗಳಿಗೆ ಮೇಲ್ಪಟ್ಟು ಇರುವವರು ಎಷ್ಟು ಜನ ಇದ್ದಾರೆ?

ಶ್ರೀ ಎ. ಆರ್. ಬದರೀನಾರಾಯಣ.—10 ವರ್ಷಗಳಿಗೆ ಮೇಲ್ಪಟ್ಟು ಇರುವವರ ನಂಬರು ಇಲ್ಲ. I want notice.

ಶ್ರೀ ಬಿ. ಬೈರಪ್ಪಾಜಿ.—ಒಟ್ಟಿನಲ್ಲಿ ಅವರ ಸರ್ವಿಸ್‌ನೊಳಗೆ 30 ವರ್ಷ ಒಂದೇ ಕಡೆ ಒಂದೇ ಸ್ಥಳದಲ್ಲಿ ಇರುವವರು ಬೇಕಾದಷ್ಟು ಜನ ಇದ್ದಾರೆ. ಆ ರೀತಿ ಒಂದೇ ಸ್ಥಳದಲ್ಲಿ ಇರುವುದನ್ನು ತಪ್ಪಿಸಿ ಸ್ವಂತ ಸ್ಥಳದಿಂದ ಬೇರೆ ಕಡೆಗೆ ವರ್ಗ ಮಾಡುವ ತತ್ವವನ್ನು ಇಟ್ಟುಕೊಂಡು ವರ್ಗ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ.—ಅದು ಆಗಬಾರದು ಎಂದು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರು ಸರಕಾರದ ನೀತಿಗೆ ಬೆಂಬಲ ಕೊಟ್ಟಿದ್ದಕ್ಕೋಸ್ಕರ ಅವರನ್ನು ವಂದಿಸುತ್ತೇನೆ. ಟ್ರಾನ್ಸ್‌ಫರ್ ವಿಚಾರದಲ್ಲಿ ಯಾರೂ ಹೆಚ್ಚು ಪ್ರವೇಶ ಮಾಡುತ್ತಾ ಇಲ್ಲ. ಆದುದರಿಂದ ಸರಕಾರದ ನೀತಿ ಸ್ವಲ್ಪ ಚೆನ್ನಾಗಿ ನಡೆಯುತ್ತಾ ಇದೆ.